**gravity of griefto decide you won't fall"** ಎಂದು ಹೇಳಿದ್ದಾರೆ. ಇದನ್ನು ಬಾಲಕ ದೊವಾಲೆಯ ಕೈಮೇಲಿನ ನಡಿಗೆಗೆ ಅನ್ವಯಿಸಿ ನೋಡಿದರೆ ಅವನ ಬದುಕಿನ ಇನ್ನೊಂದು ಆಯಾಮ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಅಲ್ಲಿ, ಅಭದ್ರತೆ, ಯುದ್ಧ, ಬಡತನ ಮತ್ತು ಒಂಟಿತನದಿಂದ ಛಿದ್ರಗೊಂಡ ಅವನ ಬಾಲ್ಯವಿದೆ; ಅಲ್ಲಿ ಮೇಲ್ನೋಟಕ್ಕೆ ಕ್ರೂರಿ ಎನ್ನಿಸುವ, ಆದರೆ ಎದೆಯೊಳಗೆ ಬಡತನವನ್ನು, ಹೆಂಡತಿಯ ಆತಂಕ, ತಲ್ಲಣಗಳನ್ನು ಎದುರಿಸಲಾಗದೆ ನೋಯುತ್ತಿರುವ ದೊವಾಲೆಯ ಅಪ್ಪ ಕಾಣುತ್ತಾನೆ; ಯುದ್ಧದ ಭಯಾನಕತೆಗೆ ಅಕ್ಷರಶಃ ನಡುಗುತ್ತಲೇ ಬಂದೂಕಿನ ಗುಂಡುಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ದುಡಿಯುವ ಅವನ ಅಸಹಾಯಕ ತಾಯಿಯಿದ್ದಾಳೆ. ಪ್ರತಿದಿನ ಕೆಲಸದಿಂದ ಹಿಂದಿರುಗಿ ಬಂದು, ಮನೆಯಲ್ಲಿ ಯಾವ ಕೆಲಸವನ್ನೂ ಮಾಡಲಾಗದ ಭೀಕರ ಸ್ಥಿತಿಯಲ್ಲಿರುವ ಅವಳು, ರಕ್ತದ ಕಲೆಯನ್ನು ತೊಳೆದುಕೊಳ್ಳುವವಳ ಹಾಗೆ ಪದೇಪದೇ ಕೈಗಳನ್ನು ತೊಳೆದುಕೊಳ್ಳುತ್ತಾಳೆ.

ಯಾರದೋ ದುಃಖಕ್ಕೆ, ನೋವಿಗೆ ಕಿವಿಗೊಡುವ, ಅದರಲ್ಲಿ ಭಾಗಿಯಾಗುವ ಆಸಕ್ತಿ ಇಲ್ಲದ ಹಲವು ಪ್ರೇಕ್ಷಕರು, ಇವನೊಬ್ಬ ಕೆಟ್ಟ ಕಾಮೆಡಿಯನ್ ಎಂದು ತೀರ್ಮಾನಿಸಿ ಶೋದಿಂದ ಹೊರನಡೆಯುತ್ತಾರೆ. ಆ ಶೋದಲ್ಲಿ ಅವನು ಛಿದ್ರವಾಗುತ್ತಿದ್ದಾನೆ. ನೋವನ್ನು ಹೇಳುತ್ತಲೇ ನಗುವನ್ನು ಮೂಡಿಸುವ ಕೆಲಸ ಅವನಿಗೆ ಆಗುತ್ತಿಲ್ಲ. ಅವರಲ್ಲಿ ಕೆಲವರು ತಮ್ಮ ಅಸಮಾಧಾನವನ್ನು ಹೊರಗೆಡವಿ ಹೋದರೆ, ಮತ್ತೆ ಕೆಲವರು ಮೌನವಾಗಿ ಎದ್ದುಹೋಗುತ್ತಾರೆ. ಲಜಾರ್‌ಗೂ ತಾನೇಕೆ ಇಲ್ಲಿ ಕುಳಿತಿದ್ದೇನೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಅದೇ ಸಮಯಕ್ಕೆ ತನ್ನನ್ನೇ ತಾನು ಗೇಲಿಮಾಡಿಕೊಳ್ಳುತ್ತ, ಲೇವಡಿ ಮಾಡಿಕೊಳ್ಳುತ್ತಾ, ರೋಗ–ಹಸಿವು–ದುಃಖ–ಆತಂಕಗಳನ್ನು ಮರೆಮಾಚುವ ದೊವಾಲೆಯ ಪ್ರಾಮಾಣಿಕತೆ ಅವನನ್ನು ಅಲ್ಲಿಯೇ ತಡೆದು ನಿಲ್ಲಿಸುತ್ತದೆ.

ತನ್ನನ್ನೇ ತಾನು ನೋಡಿಕೊಳ್ಳುತ್ತ ಮಾತನಾಡುವ ದೊವಾಲೆಯು ಅದಕ್ಕಾಗಿ ತನ್ನದೇ ಭಾಷೆ ಮತ್ತು ನುಡಿಗಟ್ಟನ್ನೂ ಸೃಷ್ಟಿಸಿಕೊಳ್ಳುತ್ತಾನೆ. ಅದು ಮೇಲ್ನೋಟಕ್ಕೆ ಎಲ್ಲವನ್ನೂ ಉಡಾಫೆ ಮಾಡುವ ಭಾಷೆ. ನಿಜವಾದ ಭಾವನೆಗಳನ್ನು ಗೇಲಿಮಾಡುವ, ಯಾವುದರ ಬಗ್ಗೆಯೂ ಗೌರವ ಇಲ್ಲದಂತೆ ತೋರುವ ಭಾಷೆ. ಆದರೆ ಅವನ ಬದುಕಿನೊಳಗೆ ನಾವೂ ಸಹಪ್ರಯಾಣಿಕರಾಗುತ್ತ ಹೋದಂತೆ ಅವನ ಉಡಾಫೆಯ ಆಳದಲ್ಲಿ ಹುದುಗಿರುವುದು ಪ್ರಾಮಾಣಿಕತೆ ಮತ್ತು ಒಟ್ಟು ಸಮುದಾಯದ ಬಗೆಗಿರುವ ಕಾಳಜಿ ಎನ್ನುವುದು ಕಾಣುತ್ತದೆ. ಬೇರೆಬೇರೆ ವಿಷಯಗಳನ್ನು ನಿರೂಪಿಸಲು ಅವನು ಬಳಸುವ ಭಾಷೆ ಹಾಗೂ ಅದರ ಲಯಗಳನ್ನು ಗಮನಿಸಿದಾಗ ಇದು ನಮಗೆ ಅರ್ಥವಾಗತೊಡಗುತ್ತದೆ.

ಒಂದು ಶ್ರೇಷ್ಠ ಕೃತಿಯು ಆ ಲೇಖಕನ ಬರಹ ಮೀಮಾಂಸೆಯ ಕಥಾನಕವೂ ಆಗಿರುತ್ತದೆ ಎಂಬುದಕ್ಕೆ 'ಎ ಹಾರ್ಸ್ ವಾಕ್ಸ್ ಇಂಟು ಎ ಬಾರ್' ಮಾದರಿಯಂತಿದೆ. ಕಾದಂಬರಿಯು ಒಬ್ಬ ಕಾಮೆಡಿಯನ್‌ನ ಜೀವನದೃಷ್ಟಿಯ ಮೂಲಕ ವಿಶೇಷವಾಗಿ ಕಾದಂಬರಿ ಪ್ರಕಾರ ಮತ್ತು ಒಟ್ಟಾರೆಯಾಗಿ ಬರವಣಿಗೆ ಕ್ರಿಯೆಯ ಆಳವಾದ ವಿಶ್ಲೇಷಣೆಯನ್ನು ನಮ್ಮ ಮುಂದಿಡುವ ಕ್ರಮ ಕುತೂಹಲಕಾರಿಯಾದದ್ದು: ಕಾದಂಬರಿಯಲ್ಲಿ ಬದುಕಿನ ಕತೆಯ ಒಂದು ಎಳೆಯಿದೆ, ಅದನ್ನು ಹೇಳುವ ಕತೆಗಾರನಿದ್ದಾನೆ; ಕಾಮೆಡಿಯನ್ ಹೇಳುತ್ತಿರುವುದು ತನ್ನ ಬಗ್ಗೆಯೇ ಆದರೂ, ಅವನ ಮೂಲಕ ಮಾತನಾಡುತ್ತಿರುವ ಕಾದಂಬರಿಕಾರನಿಗೆ ಕೂಡ ಇದು ಪ್ರತಿಕ್ಷಣದ ಉಳಿವಿನ ಹೋರಾಟ; ಕತೆಯನ್ನು ಹೇಳುವಾಗ ಹಾದಿತಪ್ಪುವ ವಿವರಗಳನ್ನು ಸರಿದಾರಿಗೆ ತಂದು ನಿಲ್ಲಿಸುವ